# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ : ಸ.ಅ/ವಾರ್ಡ್ ಸಮಿತಿ/ಸಭೆ- 5/2020-21 ದಿನಾಂಕ : 30-11-2020

## -: ಸಭಾ ಸೂಚನಾ ಪತ್ರ :-

**ಉಲ್ಲೇಖ :** 1) ಮಾನ್ಯ ಆಯುಕ್ತರ ಕಛೇರಿಯ ತಿದ್ದುಪಡಿ ಆದೇಶ ಸಂಖ್ಯೆ : ಬಿ12(5)ಪಿಆರ್/35/ 2020-21 ದಿನಾಂಕ : 02-10-2020.

-****-

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಸರ್ವಜ್ಞನಗರ ವಿಭಾಗ, ಮಾರುತಿಸೇವಾನಗರ ಉಪವಿಭಾಗ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ-29 ಕಾಚರಕನಹಳ್ಳಿಯ ಕುವೆಂಪು ಪಾರ್ಕ್ ಪಕ್ಕದಲ್ಲಿರುವ ಪಾಲಿಕೆ ಕಟ್ಟಡದಲ್ಲಿ ದಿನಾಂಕ : 05-12-2020 ಶನಿವಾರ ರಂದು ಬೆಳಿಗ್ಗೆ 10-30 ಗಂಟೆಗೆ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರು ನಿಯೋಜಿಸಿರುವ ವಾರ್ಡ್‌ನ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ, ವಾರ್ಡ್ ಸಮಿತಿ ಸಭೆಯನ್ನು ಕರೆಯಲಾಗಿದ್ದು, ಸದರಿ ಸಭೆಗೆ ಎಲ್ಲಾ ಸದಸ್ಯರು ಸಕಾಲದಲ್ಲಿ ಆಗಮಿಸಿ ಸಭೆಯನ್ನು ಯಶಸ್ವಿಗೊಳಿಸಲು ಕೋರಿದೆ.

## -: ಸಭಾ ಅಜೆಂಡಾ :-

| | |
|---|---|
| 1 | ವಾರ್ಡಿನ ವಿವಿಧ ಬಡಾವಣೆಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ. |
| 2 | ವಾರ್ಡಿನ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ. |
| 3 | ಕಂದಾಯ ಇಲಾಖೆಗೆ ಸಂಬಂಧಿಸಿದ ಬಗ್ಗೆ. |
| 4 | ನೀರು ಸರಬರಾಜು ಮತ್ತು ಒಳಚರಂಡಿಗೆ (BWSSB) ಸಂಬಂಧಿಸಿದ ವಿಷಯಗಳ ಬಗ್ಗೆ. |
| 5 | ವಿದ್ಯುತ್ ಸರಬರಾಜು (Bescom) ಸಂಬಂಧಿಸಿದ ವಿಷಯಗಳ ಬಗ್ಗೆ. |
| 6 | ಉದ್ಯಾನವನ ಮತ್ತು ಬೀದಿ ದೀಪ ನಿರ್ವಹಣೆಯ ಕುರಿತು |
| 7 | Traffic isues and Law and Order issues |
| 8 | ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಬಗ್ಗೆ ಚರ್ಚಿಸುವ ಬಗ್ಗೆ. |
| 9 | ಮಾನ್ಯ ನೋಡಲ್ ಅಧಿಕಾರಿಯವರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಷಯಗಳು. |

(ನೋಡಲ್ ಅಧಿಕಾರಿ ರವರ ಆದೇಶದ ಮೇರೆಗೆ)

ಸಹಿ/-
ಕಾರ್ಯದರ್ಶಿ ವಾರ್ಡ್ ಸಮಿತಿ-29
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್-29

**ಪ್ರತಿಯನ್ನು:**

ಶ್ರೀಮತಿ ಸರಸ್ವತಿ, ಸದಸ್ಯರು, ಜಲವಾಯು ವಿಹಾರ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್ ರವರು ಸಭೆಯಲ್ಲಿ ಭಾಗವಹಿಸಲು ಕೋರಿದೆ.

2. ಶ್ರೀ ಉತ್ತಪ್ಪ, ಸದಸ್ಯರು (ಅಧ್ಯಕ್ಷರು, ಹೆಚ್.ಆರ್.ಬಿ.ಆರ್ 3ನೇ ಬ್ಲಾಕ್ ಅಸೋಸಿಯೇಷನ್) [illegible] ಸಭೆಯಲ್ಲಿ ಭಾಗವಹಿಸಲು ಕೋರಿದೆ.
3. ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ) ರವರು ಸಭೆಯಲ್ಲಿ ಭಾಗವಹಿಸಲು ಕೋರಿದೆ.
4. ವಾರ್ಡ್ ಸಮಿತಿಯ ಎಲ್ಲಾ ಸದಸ್ಯರುಗಳ ಮಾಹಿತಿಗಾಗಿ ಹಾಗೂ ಸಭೆಯಲ್ಲಿ ಭಾಗವಹಿಸಲು ಕೋರಿದೆ.
5. ಕಲ್ಯಾಣಾಧಿಕಾರಿಗಳು, ಪೂರ್ವ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ
6. ಅರಣ್ಯ ಸಂರಕ್ಷಣಾಧಿಕಾರಿಗಳು, ಪೂರ್ವ ವಲಯ, ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ
7. ಸಹಾಯಕ ಕಾರ್ಯಪಾಲಕ ಅಭಿಯಂತರರು, (BWSSB) ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, (Bescom) ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ (SWM) (ಸರ್ವಜ್ಞನಗರ), ಬಿಬಿಎಂಪಿರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
10. ಸಹಾಯಕ ಕಂದಾಯ ಅಧಿಕಾರಿಗಳು, ಹೆಚ್.ಬಿ.ಆರ್ ಲೇಔಟ್ ಉಪವಿಭಾಗ, ಬಿಬಿಎಂಪಿರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂದಿಯನ್ನು ನಿಯೋಜಿಸಲು ಕೋರಿದೆ.
11. ಪೊಲೀಸ್ ಇನ್ಸ್‌ಫೆಕ್ಟರ್ (ಸಂಚಾರ) ಬಾಣಸವಾಡಿ ಪೊಲೀಸ್ ಠಾಣೆ ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
12. ಪೊಲೀಸ್ ಇನ್ಸ್‌ಫೆಕ್ಟರ್ (ಕಾನೂನು ಮತ್ತು ಸುವ್ಯವಸ್ಥೆ) ಬಾಣಸವಾಡಿ ಪೊಲೀಸ್ ಠಾಣೆ ರವರು ಖುದ್ದಾಗಿ ಭಾಗವಹಿಸಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
13. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ರಸ್ತೆಗಳು ಮತ್ತು ಮೂಲಭೂತ ಸೌಕರ್ಯಗಳು ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
14. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ (SWD) ರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
15. ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಬೀದಿ ದೀಪಗಳ ವಿಭಾಗ-ಪೂರ್ವ), ಬಿಬಿಎಂಪಿರವರ ಮಾಹಿತಿಗಾಗಿ ಹಾಗೂ ಖುದ್ದಾಗಿ ಹಾಜರಾಗಲು ಅಥವಾ ತಮ್ಮ ಸಿಬ್ಬಂಧಿಯನ್ನು ನಿಯೋಜಿಸಲು ಕೋರಿದೆ.
16. ಆರೋಗ್ಯ ವೈದ್ಯಾಧಿಕಾರಿಗಳು, ಕಾಚರಕನಹಳ್ಳಿ ರವರು ಖುದ್ದಾಗಿ ಹಾಜರಾಗಲು ಕೋರಿದೆ.
17. ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ ರವರ ಮಾಹಿತಿಗಾಗಿ ರವಾನಿಸಿದೆ.

1/12/2020

**ಕಾರ್ಯದರ್ಶಿ ವಾರ್ಡ್ ಸಮಿತಿ-29**

**ಹಾಗೂ ಸಹಾಯಕ ಅಭಿಯಂತರರು,**

**ವಾರ್ಡ್-29**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂಖ್ಯೆ.29 ಕಾಚರಕನಹಳ್ಳಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಛೇರಿಯ ಸಭಾಂಗಣದಲ್ಲಿ ದಿನಾಂಕ: 05-12-2020 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು

**ಹಾಜರಿದ್ದ ಸದಸ್ಯರು,**

1. ಶ್ರೀ ಪ್ರಸನ್ನಕುಮಾರ್ ಪ್ರವೀಣ್ ಎ, ಅಧ್ಯಕ್ಷರು, ವಾರ್ಡ್ ಸಮಿತಿ ನೋಡೆಲ್ ಅಧಿಕಾರಿಗಳು,
2. ಶ್ರೀ.ಹೆಚ್.ವಿ.ಕೃಷ್ಣಾರೆಡ್ಡಿ, ಸದಸ್ಯ ಕಾರ್ಯದರ್ಶಿ ಮತ್ತು ಸಂಚಾಲಕರು,
3. ಶ್ರೀ.ಹನುಮಂತಪ್ಪ, ಹಿರಿಯ ಆರೋಗ್ಯ ನಿರೀಕ್ಷಕರು ಹಾಗೂ ಸದಸ್ಯರು,
4. ಶ್ರೀ.ರಾಜೇಶ್, ಕಿರಿಯ ಆರೋಗ್ಯ ನಿರೀಕ್ಷಕರು,
5. ಶ್ರೀಮತಿ ಸರಸ್ವತಿ, ಸದಸ್ಯರು, ಜಲವಾಯು ವಿಹಾರ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್,
6. ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ),
7. ಪದಾಧಿಕಾರಿಗಳು, ಹೆಚ್.ಬಿ.ಆರ್ ಬಡಾವಣೆ, 1ನೇ ಹಂತ ಅಸೋಸಿಯೇಷನ್ (ರಿ)

**ಹಾಜರಿದ್ದ ಅಧಿಕಾರಿಗಳು**

1. ಶ್ರೀ ಪುಟ್ಟಸ್ವಾಮಿ, ಸಹಾಯಕ ಅಭಿಯಂತರರು, ಬೆಸ್ಕಾಂ,
2. ಶ್ರೀ.ದವಲ್, ಸಹಾಯಕ ಅಭಿಯಂತರರು, (ಬಿ.ಡಬ್ಲ್ಯೂ.ಎಸ್.ಎಸ್.ಬಿ),
3. ಶ್ರೀ ರಾಜಶೇಖರ್, ಕಂದಾಯ ನಿರೀಕ್ಷಕರು,
4. ಸಹಾಯಕ ಸಬ್ ಇನ್ಸ್‌ಪೆಕ್ಟರ್ (ಕಾನೂನು ಮತ್ತು ಸುವ್ಯವಸ್ಥೆ) ಬಾಣಸವಾಡಿ ಪೊಲೀಸ್ ಠಾಣೆ,
5. ಡಾ॥ ಶಾಹೀನಾ, ವೈದ್ಯಾಧಿಕಾರಿಗಳು,
6. ಶ್ರೀಮತಿ ರಾಜೇಶ್ವರಿ, ಕಲ್ಯಾಣ ಇಲಾಖೆ,

ಈ ಸಭೆಗೆ ಹಾಜರಾಗಿದ್ದ ಮೇಲ್ಕಂಡ ಅಧ್ಯಕ್ಷರು (ನೋಡೆಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1) **ಶ್ರೀಮತಿ ಶೋಭ, ಪದಾಧಿಕಾರಿಗಳು, ಹೆಚ್.ಬಿ.ಆರ್ ಬಡಾವಣೆ, 1ನೇ ಹಂತ ಅಸೋಸಿಯೇಷನ್ (ರಿ)** ರವರು ಮಾತನಾಡಿ, ಸರಸ್ವತಿ ರಸ್ತೆಯಲ್ಲಿ ರಾತ್ರಿ ಸಮಯದಲ್ಲಿ ಕಸವನ್ನು ಸುರಿಯುತ್ತಾರೆ. ಕಸವನ್ನು ಕೂಡಲೇ ಸ್ಥಳಾಂತರಿಸಬೇಕು ಮತ್ತು ಹೆಚ್.ಬಿ.ಆರ್ 1ನೇ ಹಂತದಲ್ಲಿ ಹಾದುಹೋಗಿರುವ ರಾಜಕಾಲುವೆಯಲ್ಲಿ ಹೂಳು ತುಂಬಿದ್ದು, ನೀರು ಸರಾಗವಾಗಿ ಹರಿಯುತ್ತಿರುವುದಿಲ್ಲ ಎಂದು ಸಭಾ ಗಮನಕ್ಕೆ ತಂದಾಗ, ಈ ಬಗ್ಗೆ ಚರ್ಚಿಸಲಾಗಿ, ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ನಿರೀಕ್ಷಕರು ಮಾತನಾಡಿ ಕಸವನ್ನು ಹಸಿ ಮತ್ತು ಒಣ ಕಸವನ್ನಾಗಿ ಕಡ್ಡಾಯವಾಗಿ ಬೇರ್ಪಡಿಸುತ್ತಿರುವುದರಿಂದ ಕಸವನ್ನು ತ್ವರಿತಾಗಿ ಸ್ಥಳಾಂತರಿಸಲು ತಡವಾಗಿರುತ್ತದೆ. ಈ ಕೂಡಲೇ ಸರಸ್ವತಿ ರಸ್ತೆಯಲ್ಲಿ ಸುರಿದಿರುವ ಕಸವನ್ನು ಕೂಡಲೇ ಸ್ಥಳಾಂತರಿಸುವುದಾಗಿ ಸಭೆಗೆ ತಿಳಿಸಿರುತ್ತಾರೆ. ಮತ್ತು ಬೃಹತ್ ನೀರುಗಾಲುವೆಯಲ್ಲಿ ಹೂಳು ತುಂಬಿದ್ದು, ಹೂಳನ್ನು ತೆಗೆದು ಮಳೆ ನೀರು ಸರಾಗವಾಗಿ ಹರಿಯಲು ಕ್ರಮ ಕೈಗೊಳ್ಳುವಂತೆ ರಾಜಕಾಲುವೆಗಳ ವಿಭಾಗ ರವರಿಗೆ ಪತ್ರ ಬರೆಯಲು ಸಭೆಯು ಸರ್ವಾನಿಮತದಿಂದ ಆದೇಶಿಸಿತು.

2) **ಶ್ರೀ ಪ್ರವೀಣ್, ಪದಾಧಿಕಾರಿಗಳು, ಹೆಚ್.ಬಿ.ಆರ್ ಬಡಾವಣೆ, 1ನೇ ಹಂತ ಅಸೋಸಿಯೇಷನ್ (ರಿ)** ರವರು ಮಾತನಾಡಿ, ಹೆಚ್.ಬಿ.ಆರ್ ಬಡಾವಣೆಯಲ್ಲಿ ಖಾಲಿ ನಿವೇಶನಗಳಿದ್ದು, ಈ ನಿವೇಶನದಲ್ಲಿ ಕಸವನ್ನು ರಾತ್ರಿ ಸಮಯದಲ್ಲಿ ಎಸೆಯುತ್ತಿದ್ದು, ಇದರಿಂದ ವಾತಾವರಣ ಕಲುಷಿತವಾಗಿರುತ್ತದೆ ಎಂದು ಮತ್ತು ರಾಮ ದೇವಸ್ಥಾನ ರಸ್ತೆಯಲ್ಲಿ ಹಾಲಿ ಸುವ್ಯವಸ್ಥಿತವಾಗಿ ನಿರ್ಮಿಸಿರುವ ಪಾದಾಚಾರಿ ರಸ್ತೆಯ ಮೇಲೆ ತಾತ್ಕಾಲಿಕ ಅಂಗಡಿಗಳನ್ನು ಹಾಕಿ ವ್ಯಾಪಾರ ವಹಿವಾಟು ನಡೆಸುತ್ತಿರುತ್ತಾರೆ ಎಂದು ಸಭಾ ಗಮನಕ್ಕೆ ತಂದಾಗ ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಗಿ, ಖಾಲಿ ನಿವೇಶನಗಳ ಆಸ್ತಿ ಸಂಖ್ಯೆ ಮತ್ತು ಮಾಲೀಕರನ್ನು ಗುರುತಿಸಿ, ನಂತರ ಮಾಲೀಕರಿಗೆ ತಿಳುವಳಿಕೆ ಪತ್ರವನ್ನು ನೀಡಲು ಸಭೆಯಲ್ಲಿ ಹಾಜರಿದ್ದ ಕಂದಾಯ ನಿರೀಕ್ಷಕರಿಗೆ ಸಭೆಯಲ್ಲಿ ಸರ್ವಾನುಮತದಿಂದ ಸೂಚಿಸಲಾಯಿತು. ನಂತರ ಆರೋಗ್ಯ, ಕಂದಾಯ, ಕಾಮಗಾರಿ ವಿಭಾಗದವರು ಪೊಲೀಸ್‌ರ ಸಹಯೋಗದೊಂದಿಗೆ ವಾರ್ಡಿನ ಪ್ರಮುಖ ರಸ್ತೆಗಳ ಪಾದಾಚಾರಿ ಮಾರ್ಗಗಳಲ್ಲಿ ಒತ್ತುವರಿ ಮಾಡಿ ವ್ಯಾಪಾರ ವಹಿವಾಟನ್ನು ನಡೆಸುತ್ತಿರುವುದನ್ನು ತೆರವುಗೊಳಿಸಿ, ಸಾರ್ವಜನಿಕರಿಗೆ ಪಾದಾಚಾರಿ ಮಾರ್ಗದಲ್ಲಿ ಓಡಾಡಲು ಅನುವು ಮಾಡಿಕೊಡಲು ಸಭೆಯು ಸರ್ವಾನುಮತದಿಂದ ಸೂಚಿಸಿತು.

3) **ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ)** ರವರು ಮಾತನಾಡಿ, ಚಿನ್ನಪ್ಪ ಬಡಾವಣೆ, ಕಮ್ಮನಹಳ್ಳಿ, ರಾಮಯ್ಯ ಬಡಾವಣೆ ಪ್ರದೇಶಗಳಲ್ಲಿ ಸುಮಾರು ಬೀದಿ ದೀಪಗಳು ಉರಿಯುತ್ತಿರುವುದಿಲ್ಲ ಎಂದು ಸಭಾ ಗಮನಕ್ಕೆ ತಂದಾಗ, ಸಭೆಯಲ್ಲಿ ಈ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ, ಸಭೆಗೆ ವಿದ್ಯುತ್ ದೀಪಗಳ ವಿಭಾಗದವರು ನಿರಂತರವಾಗಿ ಗೈರು ಹಾಜರಾಗುತ್ತಿದ್ದು, ಈ ಬಗ್ಗೆ ಮೇಲಾಧಿಕಾರಿಗಳಿಗೆ ಪತ್ರ ಬರೆಯಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

4) **ಶ್ರೀ ಪಿಳ್ಳಪ್ಪ (ಅಧ್ಯಕ್ಷರು, ರಾಮಯ್ಯ ಬಡಾವಣೆ ನಿವಾಸಿಗಳ ಸಂಘ)** ರವರು ಮಾತನಾಡಿ, ವಾರ್ಡ್ ಪ್ರದೇಶದಲ್ಲಿ ಅನೇಕ ರಸ್ತೆಗಳಿಗೆ ರಸ್ತೆ ಹಂಪ್‌ಗಳನ್ನು ಹಾಕಲಾಗಿದ್ದು, ಇನ್ನೂ ಅನೇಕ ಕಡೆಗಳಲ್ಲಿ ಹಂಪ್‌ಗಳ ಅವಶ್ಯಕತೆ ಇರುತ್ತದೆ ಎಂದು ಸಭಾ ಗಮನಕ್ಕೆ ತಿಳಿಸಿದಾಗ, ಈ ಬಗ್ಗೆ ಹೆಚ್.ಬಿ.ಆರ್ ಬಡಾವಣೆ, 1ನೇ ಹಂತ ಅಸೋಸಿಯೇಷನ್ (ರಿ) ರವರು ಸಹ ಹೆಚ್.ಬಿ.ಆರ್ ಬಡಾವಣೆ, 1ನೇ ಹಂತ ರಸ್ತೆಗಳಲ್ಲಿ ರಸ್ತೆ ಹಂಪ್‌ಗಳ ಅವಶ್ಯಕತೆ ಇರುತ್ತದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಸಭೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಗಿ, ಅವಶ್ಯಕತೆ ಇರುವ ಸ್ಥಳಗಳಲ್ಲಿ ಪರಿಶೀಲಿಸಿ (HRPC) ವೈಜ್ಞಾನಿಕ ರಸ್ತೆ ಹಂಪ್‌ಗಳನ್ನು ಅಳವಡಿಸಲು ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ರವರಿಗೆ ಪತ್ರ ಬರೆಯಲು ಸಭೆಯು ಸರ್ವಾನುಮತದಿಂದ ಆದೇಶಿಸಿತು.

5) **ಶ್ರೀ ಪ್ರವೀಣ್, ಪದಾಧಿಕಾರಿಗಳು, ಹೆಚ್.ಬಿ.ಆರ್ ಬಡಾವಣೆ, 1ನೇ ಹಂತ ಅಸೋಸಿಯೇಷನ್ (ರಿ)** ರವರು ಮಾತನಾಡಿ, ಹೆಚ್.ಬಿ.ಆರ್ ಬಡಾವಣೆ, 1ನೇ ಹಂತ ಪ್ರದೇಶದಲ್ಲಿ ಪದೇ ಪದೇ ವಿದ್ಯುತ್ ಕಡಿತಗೊಳಿಸಲಾಗುತ್ತಿರುತ್ತದೆ. ಇದರಿಂದ ಮನೆಯಲ್ಲಿ ಆನ್‌ಲೈನ್ ತರಗತಿಗಳಿಗೆ ತೊಂದರೆಯಾಗುತ್ತಿರುತ್ತದೆ ಎಂದು ಸಭಾ ಗಮನಕ್ಕೆ ತಂದಾಗ, ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಗಿ ಸಭೆಯಲ್ಲಿ ಹಾಜರಿದ್ದ, ಬೆಸ್ಕಾಂ ಇಲಾಖೆಯ ಅಭಿಯಂತರರು, ಎ.ಬಿ.ಸಿ ಕೇಬಲ್‌ಗಳನ್ನು ಅಳವಡಿಸುತ್ತಿರುವುದರಿಂದ ಆಗಾಗ ವಿದ್ಯುತ್

ನಿಲುಗಡೆ ಮಾಡಲಾಗುತ್ತಿರುತ್ತದೆ. ಮುಂದಿನ ದಿನಗಳಲ್ಲಿ ನಿರಂತರವಾಗಿ ವಿದ್ಯುತ್ ಸರಬರಾಜು ಮಾಡುವುದಾಗಿ ಸಭೆಗೆ ತಿಳಿಸಿದರು.

6) **ಶ್ರೀಮತಿ ಸರಸ್ವತಿ, ಸದಸ್ಯರು, ಜಲವಾಯು ವಿಹಾರ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್** ರವರು ಮಾತನಾಡಿ, ಕೋವಿಡ್ ಬಗ್ಗೆ ಪ್ರಸ್ತಾಪಿಸಿದಾಗ, ಸಭೆಯಲ್ಲಿ ಹಾಜರಿದ್ದ ವೈದ್ಯಾಧಿಕಾರಿಗಳು ಮಾತನಾಡಿ, ಕೊರೋನಾ ನಮ್ಮ ವಾರ್ಡ್ ಪ್ರದೇಶದಲ್ಲಿ ನಿಯಂತ್ರಣಕ್ಕೆ ಬರುತ್ತಿರುವುದಾಗಿ ತಿಳಿಸುತ್ತಾ, ಪ್ರಸ್ತುತ ವಾರ್ಡ್ ಪ್ರದೇಶದಲ್ಲಿ 562 ಕೊವಿಡ್ ಪ್ರಕರಣಗಳಿದ್ದು, ಈ ಪೈಕಿ 538 ಆಸ್ಪತ್ರೆಯಿಂದ ಚಿಕಿತ್ಸೆ ಪಡೆದು ಬಿಡುಗಡೆಯಾಗಿರುತ್ತಾರೆ. 19 ಜನ ಮರಣ ಹೊಂದಿರುತ್ತಾರೆ, ಸಕ್ರಿಯ ಪ್ರಕರಣಗಳು 05 ಜನ ಮಾತ್ರ ಇರುತ್ತಾರೆ. ನಮ್ಮ ವಾರ್ಡ್ ಪ್ರದೇಶದಲ್ಲಿ ಈಗಾಗಲೇ ಮೊಬೈಲ್ ಚಿಕಿತ್ಸಾ ಕೇಂದ್ರಗಳನ್ನು ನಿಯೋಜನೆ ಮಾಡಿ, ಮೊಬೈಲ್ ಚಿಕಿತ್ಸಾ ಕೇಂದ್ರಗಳಲ್ಲಿ ಮತ್ತು ವಾರ್ಡ್ ಆಸ್ಪತ್ರೆಗಳಲ್ಲಿ ನಿರಂತರವಾಗಿ ಕೊವಿಡ್ ಪರೀಕ್ಷೆಗಳನ್ನು ನಡೆಸಲಾಗುತ್ತಿರುತ್ತದೆ. ರ್‍ಯಾಪಿಡ್ ಆಂಟಿಜನ್ ಟೆಸ್ಟ್ ಮತ್ತು ಆರ್.ಟಿ.ಪಿ.ಸಿ ಟೆಸ್ಟ್‌ಗಳನ್ನು ಮಾಡುತ್ತಿದ್ದು, ರ್‍ಯಾಪಿಡ್ ಆಂಟಿಜನ್ ಟೆಸ್ಟ್‌ನಲ್ಲಿ 20 ನಿಮಿಷಗಳಲ್ಲಿ ಪರೀಕ್ಷಾ ವರದಿಯನ್ನು ನೀಡಲಾಗುತ್ತದೆ ಹಾಗೂ ಆರ್.ಟಿ.ಪಿ.ಸಿ ಟೆಸ್ಟ್‌ನಲ್ಲಿ 48 ಗಂಟೆಗಳ ನಂತರ ಪರೀಕ್ಷಾ ವರದಿಯನ್ನು ನೀಡಲಾಗುತ್ತಿರುತ್ತದೆ ಎಂದು ಸಭೆಗೆ ತಿಳಿಸಿದರು.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಮಾತನಾಡಿ, ಇಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿರುವ ಎಲ್ಲಾ ನಿರ್ಣಯಗಳ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಲು ಆದೇಶಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ವಾರ್ಡ್ ಸಮಿತಿ ಸದಸ್ಯ ಕಾರ್ಯದರ್ಶಿಗಳು | Prasanna Kumar. A 13/12/2020 |
| | ಅಧ್ಯಕ್ಷರು |
| ಸಹಾಯಕ ಅಭಿಯಂತರರು | (ನೋಡೆಲ್ ಅಧಿಕಾರಿಗಳು) |
| ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ | ವಾರ್ಡ್ ಸಂಖ್ಯೆ.29, ಕಾಚರಕನಹಳ್ಳಿ |

**ಪ್ರತಿಯನ್ನು**

15/12/2020

1) ವಲಯ ವಿಶೇಷ ಆಯುಕ್ತರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರರು (ಪೂರ್ವ) ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮುಖ್ಯ ಅಭಿಯಂತರರು (ಪೂ) ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗಾಗಿ. – 15/12/2020
5) ವಾರ್ಡ್ ಕಮಿಟಿಯ ಸದಸ್ಯರಿಗೆ.
6) ಕಛೇರಿ ಕಡತಕ್ಕೆ.

15/12/2020